ಶ್ರೀ ಕೆ. ಪುಟ್ಟಸ್ವಾಮಿ.—ಹಿಂದೆ ಹಾವೇರಿಯಲ್ಲಿ ಸಿವಿಲ್ ಕೋರ್ಟ್ ಓಪನ್ ಮಾಡುವ ಅವಶ್ಯಕತೆ ಇದೆ. ಅದು ಸರ್ಕಾರದವರ ಪರಿಶೀಲನೆಯಲ್ಲಿದೆ. ಹೈಕೋರ್ಟ್‌ನವರು ಶಿಫಾರಸ್ಸು ಮಾಡಿ ಕಳುಹಿಸಿದ್ದಾರೋ ಇಲ್ಲವೋ ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಸಿದ್ದಯ್ಯ ಕಾಶಿಮಠ್.—ಸ್ವಾಮಿ, ರಾಣಿಬೆನ್ನೂರು, ಹಾವೇರಿ ಮತ್ತು ಗದಗ್ ಈ ಮೂರು ತಾಲ್ಲೂಕುಗಳಿಂದ ಮನವಿಗಳು ಏನಾದರೂ ಬಂದಿವೆಯೇ? ಇದನ್ನು ನಿರ್ಧಾರ ಮಾಡುವುದು ಯಾವಾಗ ?

ಶ್ರೀ ಕೆ. ಪುಟ್ಟಸ್ವಾಮಿ.—ಇದರಲ್ಲಿ ನಿರ್ಧಾರ ಏನೂ ಇಲ್ಲ. ಅಲ್ಲಿಂದು ಮನವಿಗಳು ಬಂದಿವೆ ಅದನ್ನು ಪರಿಶೀಲನೆಗೆ ಹೈಕೋರ್ಟ್‌ಗೆ ಕಳುಹಿಸಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಹಿಂದಿನ ಮುಖ್ಯಮಂತ್ರಿಗಳು ಗದಗ್‌ನಲ್ಲಿ ಸಿವಿಲ್ ಕೋರ್ಟ್ ಓಪನ್ ಮಾಡುತ್ತೇವೆ ಎಂದು ಹೇಳಿ ಕೈಬಿಟ್ಟರು. ಅನಂತರ ಹಾವೇರಿಯವರು ಕಾಂಗ್ರೆಸ್‌ಗೆ ಬೆಂಬಲ ಕೊಡುತ್ತಾರೆಂದು ಹಾವೇರಿಯನ್ನು ಸೆಲೆಕ್ಟ್ ಮಾಡಿದರಿ. ಈಗ ಹಾವೇರಿಯನ್ನು ಬಿಟ್ಟು ರಾಣಿಬೆನ್ನೂರಿಗೆ ಕೋರ್ಟ್ ಕೊಡುವುದಕ್ಕೆ ಒಪ್ಪಿದ್ದು ನಿಜವೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಕೊಟ್ಟಂಥ ಉತ್ತರವನ್ನು ಗಮನಿಸಿದ್ದರೆ ಅವರು ಈ ಪ್ರಶ್ನೆ ಹಾಕುತ್ತಿರಲಿಲ್ಲ. ಅವರು ಪೂರ್ವಭಾವಿಯಾಗಿಯೇ ಈ ಪ್ರಶ್ನೆ ಕೇಳಬೇಕೆಂದು ಮಾಡಿರುವುದರಿಂದ ಅದು ನಿಜವಲ್ಲ.

ಶ್ರೀ ಎನ್. ಎಲ್. ಬೆಲ್ಲದ್.—ಈ 4 ತಾಲ್ಲೂಕುಗಳ ಮಧ್ಯಾವರ್ತಿ ಇರುವ ಹಾವೇರಿಯಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ ಮಾಡುವುದಕ್ಕೆ ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ. ಆ ಬಗ್ಗೆ ಒಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈಗ ರಾಣಿಬೆನ್ನೂರು, ಹಿರೇಕೆರೂರು, ಬ್ಯಾಡಗಿ ಈ ಮೂರು ತಾಲ್ಲೂಕುಗಳನ್ನು ಸೇರಿಸಿದರೆ ಒರಿಜಿನಲ್ ಸೂಟ್ಸ್, ರೆಗ್ಯುಲರ್ ಅಪೀಲ್ಸ್, ಮಿಸಿಲೇನಿಯಸ್ ಅಪೀಲ್ಸ್ ಈ ಮೊಕದ್ದಮ್ಮೆಗಳು ಏನು ಇವೆಯೋ ಅದಕ್ಕಂತ ಹೆಚ್ಚಾಗಿ ಹಾವೇರಿಯ ಒಂದು ತಾಲ್ಲೂಕಿನಲ್ಲೇ ಇವೆ. ಆದುದರಿಂದ ಹಾವೇರಿಯಲ್ಲಿ ಒಂದು ಸಿವಿಲ್ ಜಡ್ಜ್ ನ್ಯಾಯಾಲಯವೊಂದನ್ನು ಓಪನ್ ಮಾಡುವುದು ಅವಶ್ಯಕ ಇದೆ. ಅದನ್ನು ಹೈಕೋರ್ಟ್‌ನವರ ಜೊತೆಯಲ್ಲಿ ವ್ಯವಹರಿಸಬೇಕು. ಮತ್ತು ಸರ್ಕಾರದಲ್ಲಿ ಅದಕ್ಕೆ ಬೇಕಾದಂಥ ಹಣಕಾಸಿನ ಸೌಲಭ್ಯಗಳು ದೊರೆತರೆ ಹಾವೇರಿಯಲ್ಲಿ ಸ್ಥಾಪನೆ ಮಾಡುವುದಕ್ಕೆ ಸಾಧ್ಯ ಇದೆ.

Collection of Tax by Taluk Boards and Panchayats in South Kanara District

159. Sri B. M. IDINABBA (Mangalore).—

Will the Minster for Development be pleased to state :—

(*a*) the number of Taluk Boards and Panchayat Boards in South Kanara district which have not collected the tax due to South Kanara district without making efforts in collections talukwise figures may please be furnished) ·

(*b*) the total amount so outstanding ;

(*c*) whether any measures have been taken for collecting the same ;

(*d*) if so, the time within wl ich the said collection of tax will be completed ?

Sri B. L. GOWDA (Deputy Minister for Co-operation).—

(*a*) There are no taluk boards which are in arrears of tax. Four hundred and forty panchayat boards have to collect the arrears. Details are given in the appendix.

(*b*) Rs. 7,76,896-79.

(*c*) In future, the work of collecting the tax will be entrusted to Village Accountants.

(*d*) Will be completed as early as possible.

APPENDIX

Name of the Taluk		No. of Panchayats which have to collect the arrears of tax dues in full
Udipi	...	74
Puttur	...	56
Kendapura	...	57
Bantwala	...	55
Belthangadi	...	37
Karkala	...	54
Sulia	...	35
Mangalore	...	72
	Total ...	440

Since the Taluk Boards do not impose tax, no tax is due.

ಶ್ರೀ ಬಿ. ಎಂ. ಇದಿನಬ್ಬ.–ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 440 ಪಂಚಾಯಿತಿಗಳಲ್ಲಿ 7,76,89679 ರೂಪಾಯಿಗಳು ವಸೂಲಾಗದೆ ಬಾಕಿ ಇಟ್ಟುಕೊಂಡಿದ್ದೀರಿ. ಅದರ ವಸೂಲಿ ಬಗ್ಗೆ ವಿಶೇಷ ಅಕೌಂಟೆಂಟ್‌ರುಗಳನ್ನು ನೇಮಕ ಮಾಡುತ್ತೇವೆ ಎಂದು ಹೇಳುತ್ತೀರಿ. ಈ ಪಂಚಾಯಿತಿಗಳಿಗೆ ಯಾವಾಗ ನೇಮಕ ಮಾಡುತ್ತೀರಿ ?

†ಶ್ರೀ ಬಿ. ಎಲ್. ಗೌಡ.—10 ಸಾವಿರ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಿನ ವರಮಾನ ಇರುವ ಗ್ರಾಮ ಪಂಚಾಯಿತಿಗಳಿಗೆ ಪೂರ್ಣ ಕಾರ್ಯದರ್ಶಿಯನ್ನಾಗಿಯೂ ಮತ್ತು 10 ಸಾವಿರ ರೂಪಾಯಿಗಿಂತ ಕಡಿಮೆ ಇರುವ ಗ್ರಾಮಪಂಚಾಯಿತಿಗಳಿಗೆ ಗ್ರಾಮ ಲೆಖ್ಖಾಧಿಕಾರಿಗಳೇ ಇರಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಈ ರೀತಿ ಅಕೌಂಟೆಂಟ್ ಮಾಡುವುದಕ್ಕೆ ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಬಿ. ಎಲ್ ಗೌಡ.—ಇಷ್ಟು ಸಮಯ ಎಂದು ಹೇಳುವುದಕ್ಕಾಗುವುದಿಲ್ಲ. ಡಿವಿಷನಲ್ ಕಮೀಷನರ್, ಡೆಪ್ಯೂಟಿ ಕಮೀಷನರ್ ಮತ್ತು ಬಿ.ಡಿ.ಓ. ಗಳಿಗೆ ಇದರ ಬಗ್ಗೆ ವಿಶೇಷ ಆಸಕ್ತಿ ವಹಿಸತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅವರನ್ನು ನೇಮಿಸಬೇಕೆಂದು ಹೇಳಿದ್ದೇವೆ. ಆದಷ್ಟು ಶೀಘ್ರವಾಗಿ ಮಾಡುತ್ತಾರೆ.

ಶ್ರೀ ಬಾಪೂಗೌಡ.—ಈ 2000 ಪಂಚಾಯಿತಿ ಸೆಕ್ರೆಟರಿಗಳನ್ನು ನೇಮಿಸುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಬಿ. ಎಲ್. ಗೌಡ.—ಆಗಲೇ ಹೇಳಿದ್ದೇನೆ ಆದಷ್ಟು ಶೀಘ್ರವಾಗಿ ಮಾಡುತ್ತೇವೆ ಎಂದು.

ಶ್ರೀ ಎಂ. ಎನ್. ರಾಮಣ್ಣ.—ಈ ವಸೂಲಿ ಕ್ರಮವನ್ನು ಪಂಚಾಯತಿಯಿಂದ ತೆಗೆದು ಲ್ಯಾಂಡ್ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಕೊಡುವುದು ನಿಜವೇ ?

ಶ್ರೀ ಬಿ. ಎಲ್. ಗೌಡ.—ಅಮ ನಿಜವಲ್ಲ. ಸೆಕ್ರೆಟರಿಯವರನ್ನು ನೇಮಕ ಮಾಡಿ ಆದಷ್ಟು ಶೀಘ್ರದಲ್ಲೇ ವಸೂಲಾಮಡುತ್ತೇವೆ.

Smt. WINNIFRED F. FERNANDES.—You have stated that the total arrears in South Kanara District is Rs. 7 lakhs and odd. May I know the arrears talukwise ?

Sri B. L. GOWDA.—The break-up is as follows :

		Rs.
Udipi	...	1,71,034
Puttur	...	81,334
Coondapur	...	99,866
Belthangadi	...	75,732
Bantwal	...	88,447
Mangalore	...	1,10,105
Sulia	...	37,465
Karkal	...	1,72,000

ಶ್ರೀ ಎಸ್. ಕೆ. ಅಮೀನ್.—ತಾವು ನೇಮಕ ಮಾಡಲಿರುವ ವಿಲೇಜ್ ಅಕೌಂಟೆಂಟ್‌ಗಳು ಪಂಚಾಯಿತಿ ಮಿತಿಯಲ್ಲಿ ಕೆಲಸಮಾಡುತ್ತಾರೋ ಅಥವಾ ತಾಸೀಲ್ದಾರರ ಮಿತಿಯಲ್ಲಿ ಕೆಲಸ ಮಾಡುತ್ತಾರೋ ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. 10 ಸಾವಿರ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ವರಮಾನವಿರುವ ಗ್ರಾಮ ಪಂಚಾಯತಿಗಳಲ್ಲಿ ಪೂರ್ಣ ಕಾಲದ ಕಾರ್ಯದರ್ಶಿಗಳ ವ್ಯಾಪ್ತಿಯಲ್ಲಿ ಒಳಪಡುತ್ತದೆ. 10 ಸಾವಿರ ರೂಪಾಯಿಗಿಂತ ಕಡಿಮೆ ವರಮಾನವಿರುವ ಪಂಚಾಯತಿಗಳು ಅಲ್ಲಿರುವ ಗ್ರಾಮ ವಿಲೇಜ್ ಅಕೌಂಟೆಂಟ್ಸ್‌ನವರ ಮಟ್ಟದಲ್ಲಿರುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.— ಸ್ವಾಮಿ, 440 ಪಂಚಾಯತಿಗಳಲ್ಲಿ ವಸೂಲಿ ಬಹಳ ಕಡಿಮೆ ಯಾಗಿದೆ. ಆದುದರಿಂದ ಈ ಅರಿಯರ್ಸ್‌ನ್ನು ಕಲೆಕ್ಟ್ ಮಾಡಲು ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ತಾಲ್ಲೂಕುಬೋರ್ಡುಗಳಿಗೆ ಆದೇಶ ಕೊಟ್ಟಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಅದರ ಬಗ್ಗೆ ಹೇಳಿದ್ದೇನೆ. ಡಿವಿಷನಲ್ ಕಮೀಷನರ್ ಡೆಪ್ಯೂಟಿ ಕಮೀಷನರ್, ಮತ್ತು ಬಿ.ಡಿ.ಓ. ಗಳಿಗೆ ಎಲ್ಲಾ ಪಂಚಾಯತಿಗಳಲ್ಲೂ ಅರಿಯರ್ಸನ್ನು ಕಲೆಕ್ಟ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

Disposal of Lands of Hosapatna Becharak Belaganahalli, Kasaba Hobli

161. **Sri M. K. BOMME GOWDA** (K. R. Pet).—

Will the Minister for Revenue be pleased to state :—

(*a*) whether there is any porposal before Government to dispose of lands of Hosapatna Becharak, Belaganahalli, Kasaba Hobli, K.R.Pet Taluk in one of the following ways :

(i) through darkhast ;

(ii) handing it over to Forest department for growing medicinal plants ;

(iii) to give it to the Birds Sanctuary ;

(*b*) if so, whether any definite decision has been taken ?